16) ಮಲ್ಲು ಜಂಕ್ಷನ್ (17) ಮಿನರ್ವ ವೃತ್ತ.

17) ರಾಯನ್-ಸರ್ಕಲ್

18) ರಸೆಲ್ ಮಾರ್ಕೆಟ್

19) ನವರಂಗ್ ಕೂಡು ರಸ್ತೆ

20) ಮಾಗಡಿ-ಕಾರ್ಡ್ ವೃತ್ತ.

21) ಮಲ್ಲೇಶ್ವರಂ ಸರ್ಕಲ್.

22) ಮಾರಪ್ಪನ ಪಾಳ್ಯ-ಆರ್ ಎಂ.ಸಿ ಯಾರ್ಡ್ ಹತ್ತಿರ.

23) ಉಪ್ಪಾರಪೇಟೆ ಪೋಲೀಸ್ ಠಾಣೆ ಕೂಡು ರಸ್ತೆ.

ಬಿ.ಸಿ.ಸಿ.ಬಿ.ಡಿ. ಮತ್ತು ಬಿ.ಎಂ.ಆರ್.ಡಿ.ಎ. ರವರು ಸೌಹಾರ್ದಯುತವಾಗಿ ಚರ್ಚಿಸಿ ಉದ್ದೇಶಿತ ಸಂಚಾರಿ ವ್ಯವಸ್ಥೆಯ ಸುಗಮೀಕರಣಕ್ಕೆ ಸಹಕರಿಸಿ ಪೂರ್ಣಗೊಳಿಸಬೇಕಾಗಿದೆ.

ಬೆಂಗಳೂರು ನಗರದ ಮುಖ್ಯ ರಸ್ತೆಗಳಲ್ಲಿ ಪುಟಪಾತ್ ಕ್ಯಾಂಟೀನ್‌ಗಳ ಹಾವಳಿ.

696 - ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಮುಖ್ಯ ರಸ್ತೆಗಳಾದ ಮೆಜೆಸ್ಟಿಕ್ ಪ್ರದೇಶ, ಬಸಸ್ಟ್ಯಾಂಡ್ ಇತ್ಯಾದಿ ಸ್ಥಳಗಳಲ್ಲಿ ಸಾರ್ವಜನಿಕರು ಪುಟಪಾತಗಳಲ್ಲಿ ಓಡಾಡಲು ಸ್ಥಳವಿಲ್ಲದೆ ಮುಖ್ಯ ರಸ್ತೆಗಳನ್ನೇ ಬಳಸುವ ಪರಿಸ್ಥಿತಿ ಬಂದಿರುವ ವಿಚಾರವು ಪೋಲೀಸ್ ಇಲಾಖೆಯ ಗಮನಕ್ಕೆ ಬಂದಿಲ್ಲವೆ.

ಆ) ಬಂದಿದ್ದಲ್ಲಿ, ಆ ಬಗ್ಗೆ ಸರ್ಕಾರ ಇದುವರೆವಿಗೂ ಕೈಗೊಂಡ ಕ್ರಮವೇನು?

ಇ) ಸದರಿ ಪ್ರದೇಶಗಳಲ್ಲಿ ಕೈಗಾಡಿಗಳಲ್ಲಿ ಮೊಟ್ಟೆ ಮೀನು, ಮಾಂಸ ಇಡ್ಲಿ ಚಿತ್ರಾನ್ನ, ಇತರೆ ತಿಂಡಿಗಳನ್ನು ರಾಜರೋಷವಾಗಿ ಹಗಲು ಇರುಳು ಲೆಕ್ಕಿಸದೆ ವ್ಯಾಪಾರ ಮಾಡುತ್ತಿರುವುದು ಹಾಗೂ ತಿಂದುಳಿದ ಎಲ್ಲಾ ಗಲೀಜುಗಳನ್ನು ರಸ್ತೆಯಲ್ಲಿ ಗುಡ್ಡೆ ಹಾಕಿ ಇದರಿಂದ ಓಡಾಡುವ ಸಾರ್ವಜನಿಕರ ಆರೋಗ್ಯಕ್ಕೆ ಕಾರಣರಾದವರ ಮೇಲೆ ಪೋಲೀಸ್ ಇಲಾಖೆಯಾಗಲಿ, ಆರೋಗ್ಯ ಅಧಿಕಾರಿಗಳಾಗಲಿ ಕ್ರಮ ಕೈಗೊಳ್ಳದೆ ಇರಲು ಕಾರಣವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಬಂದಿರುತ್ತದೆ.

ಆ) ಪುಟಪಾತ್ ಮೇಲೆ ವ್ಯಾಪಾರ ಮಾಡುವವರು ಕ್ರಮೇಣವಾಗಿ ಪುಟಪಾತ್ ಹಾಗೂ ರಸ್ತೆಯ ಮೇಲೆ ವ್ಯಾಪಾರ ಮಾಡಲು ಪ್ರಾರಂಭ ಮಾಡಿದ್ದು ಈ ಸಂಬಂಧವಾಗಿ 1995ರಲ್ಲಿ

ಇಂತಹವರ ಮೇಲೆ 643 ಪ್ರಕರಣಗಳನ್ನು ಕರ್ನಾಟಕ ಪೋಲೀಸ್ ಕಾಯ್ದೆ ಕಲಂ 92 (ಜ) ಪ್ರಕಾರ ದಾಖಲು ಮಾಡಿರುತ್ತದೆ. ಪ್ರಸಕ್ತ ವರ್ಷದಲ್ಲಿ 31-1-96 ರವರಗೆ 150 ಪ್ರಕರಣಗಳನ್ನು ದಾಖಲು ಮಾಡಿರುತ್ತದೆ.

ಪುಟಪಾತ್ ವ್ಯಾಪಾರಿಗಳು ತಮ್ಮ ವಹಿವಾಟನ್ನು ಹೆಚ್ಚು ಮಾಡಿದ್ದು ಬೆಂಗಳೂರು ಮಹಾನಗರ ಪಾಲಿಕೆಯವರು ಹಾಕಿಂಗ್ ಮತ್ತು ನಾನ್ ಹಾಕಿಂಗ್ ಸ್ಥಳಗಳನ್ನು ಗುರುತು ಮಾಡಿ ದಿ: 8-10-93 ರಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಈ ಆದೇಶದ ಪ್ರಕಾರ ಅಕ್ರಮವಾಗಿ ಇಟ್ಟುಕೊಂಡು ಎಲ್ಲಾ ಪುಟಪಾತ್ ಅಂಗಡಿಗಳನ್ನು ತೆರವು ಮಾಡಿಸಲಾಯಿತು.

ಈಗ ಕೆ.ಜಿ.ರಸ್ತೆ ಟ್ಯಾಂಕಬಂಡ್ ರಸ್ತೆ, ಸಂಗಮ್ ಚಿತ್ರಮಂದಿರದ ಪಕ್ಕದ ರಸ್ತೆ, ಎಸ್.ಪಿ. ರಸ್ತೆ ಮತ್ತು ತ್ರಿಭುವನ್ ಚಿತ್ರಮಂದಿರದ ಎದುರಿಗೆ ಇರುವ ರಸ್ತೆಗಳಲ್ಲಿ ಪುಟಪಾತ್ ಮೇಲೆ ವ್ಯಾಪಾರ ಮಾಡುವವರು ಅವರುಗಳನ್ನು ತೆರವುಮಾಡಿಸದಂತೆ ಮಾನ್ಯ ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿರುತ್ತಾರೆ.

ಆದರೂ ಸಹ ಅವರು ಪುಟಪಾತ್ ಒಟ್ಟು ರಸ್ತೆಯ ಮೇಲೆ ವ್ಯಾಪಾರ ಮಾಡುತ್ತಾ ಸಾರ್ವಜನಿಕ ಓಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ಅಡ್ಡಿ ಮಾಡದೆ ಇರುವ ತರಹ ನೋಡಿಕೊಳ್ಳಲಾಗುತ್ತಿದೆ.

೫) ಕಾಲುದಾರಿಗಳ ಮೇಲೆ ಮತ್ತು ರಸ್ತೆ ಪಕ್ಕದಲ್ಲಿ ವ್ಯಾಪಾರ ಮಾಡುತ್ತಾ ಸಂಚಾರ ಮತ್ತು ಪಾದಚಾರಿಗಳ ಸುಗಮ ಸಂಚಾರಕ್ಕೆ ಅಡಚಣೆ ಉಂಟು ಮಾಡಿದ ಪಾದಚಾರಿ ವ್ಯಾಪಾರಗಳ ಮೇಲೆ ಕರ್ನಾಟಕ ಪೋಲೀಸ್ ಕಾಯ್ದೆ 1963ರ ಪ್ರಕಾರ 1995ರ ಪ್ರಕರಣ ದಾಖಲು ಮಾಡಿಕೊಂಡು ಕ್ರಮ ಜರುಗಿಸಲಾಗಿದೆ.

ಪ್ರದೇಶ ಹೆಸರು	1995	1996
ಉಪ್ಪಾರಪೇಟೆ	64	15
ಚಿಕ್ಕಪೇಟೆ	269	28
ಇತರೆ ಪ್ರದೇಶಗಳು	4598	77

ಸಾರ್ವಜನಿಕರ ಆರೋಗ್ಯಕ್ಕೆ ದಕ್ಕೆ ಉಂಟು ಮಾಡುವ ವ್ಯಾಪಾರಸ್ಥರ ಮೇಲೆ ಬೆಂಗಳೂರು ಮಹಾನಗರ ಪಾಲಿಕೆಯವರು ಮತ್ತು ಪೋಲೀಸರು ಕ್ರಮ ಕೈಗೊಳ್ಳುತ್ತಾರೆ.

ಮುಖ್ಯಮಂತ್ರಿಗಳ ಪರಿಹಾರ ನಿಧಿ ವಿತರಿಸಲಾದ ಹಣ

697 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಕಳೆದ ಐದು ವರ್ಷಗಳಿಂದ ಮುಖ್ಯಮಂತ್ರಿಗಳು "ಮುಖ್ಯಮಂತ್ರಿಗಳ ಪರಿಹಾರ ನಿಧಿ" ಯಿಂದ ವಿತರಿಸಿರುವ ಪರಿಹಾರ ನಿಧಿ ಎಷ್ಟು?